# ಪೌರತ್ವ ಮಸೂದೆ ಹಿರಿಯರ ಸಮ್ಮತಿ

ಉ.ವಾ 12/12/19

## ರಾಷ್ಟ್ರಪತಿ ಅಂಕಿತ ಮಾತ್ರ ಬಾಕಿ | ಸದನಕ್ಕೆ ಮೋದಿ ವಂದನೆ



ಪೌರತ್ವ ತಿದ್ದುಪಡಿ ಮಸೂದೆ ವಿರೋಧಿಸಿ ಈಶಾನ್ಯ ರಾಜ್ಯಗಳಲ್ಲಿ ಭಾರೀ ಪ್ರತಿಭಟನೆ ನಡೆಯಿತು.

ನವದೆಹಲಿ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಪೌರತ್ವ ತಿದ್ದುಪಡಿ ವಿಧೇಯಕಕ್ಕೆ (ಸಿಎಬಿ) ಬುಧವಾರ ರಾಜ್ಯ ಸಭೆಯ ಅನುಮೋದನೆಯೂ ದೊರಕಿದೆ. ತಿದ್ದುಪಡಿ ಮಸೂದೆ ಪರವಾಗಿ 125 ಮತ ಬಂದಿದ್ದರೆ, ವಿರೋಧವಾಗಿ 105 ಮತಗಳು ಬಂದವು. ಸೋಮವಾರವೇ ಲೋಕಸಭೆ ಈ ಮಸೂದೆಗೆ ಒಪ್ಪಿಗೆ ನೀಡಿದ್ದು, ಇನ್ನು ರಾಷ್ಟ್ರಪತಿಗಳ ಅಂಕಿತವಷ್ಟೇ ಬಾಕಿ ಉಳಿದಿದೆ.

ಅತ್ತ ಮಸೂದೆಗೆ ವಿರೋಧ ವ್ಯಕ್ತಪಡಿಸಿ ಈಶಾನ್ಯ ರಾಜ್ಯಗಳಲ್ಲಿ ಭಾರೀ ಪ್ರತಿಭಟನೆ ನಡೆಯಿತು. ಭದ್ರತೆಗಾಗಿ ಸೇನೆಯನ್ನೂ ಕರೆಸಿಕೊಳ್ಳಲಾಗಿದೆ. ಈಶಾನ್ಯ ರಾಜ್ಯಗಳಲ್ಲಿ ಅನಿರ್ದಿಷ್ಟಾವಧಿವರೆಗೆ ಕರ್ಫ್ಯೂ ಜಾರಿ ಮಾಡಲಾಗಿದೆ. ಮೊಬೈಲ್ ಇಂಟರ್ನೆಟ್ ಸೇವೆ ಸ್ಥಗಿತ ಮಾಡಲಾಗಿದೆ.

**ರಾಜ್ಯಸಭೆಯಲ್ಲೂ ಬೆಂಬಲ:** ಲೋಕಸಭೆಯಲ್ಲಿ ಬಹುಮತ ಹೊಂದಿರುವ ಎನ್‌ಡಿಎ ಸರ್ಕಾರ ಸೋಮವಾರ ಮಧ್ಯರಾತ್ರಿ ಅನುಮೋದನೆ ಪಡೆದಿತ್ತು. ಆದರೆ, ರಾಜ್ಯಸಭೆ ಯಲ್ಲಿ ಸಂಖ್ಯಾಬಲ ಕೊರತೆ ಎದುರಿಸುತ್ತಿದ್ದ ಸರ್ಕಾರ, ಮಂಗಳವಾರ ಸಮಾನ ಮನಸ್ಕ ಪಕ್ಷಗಳ ಜತೆ ಮಾತುಕತೆ ನಡೆಸಿ, ಬುಧವಾರ ಮಸೂದೆ

### ಐತಿಹಾಸಿಕ ನಿರ್ಧಾರ

ಸಿಎಬಿಗೆ ಇಡೀ ಸಂಸತ್ ಅನುಮೋದನೆ ನೀಡಿದ ಬಳಿಕ ಮಾತನಾಡಿದ ಪ್ರಧಾನಿ ಮೋದಿ, ಇದೊಂದು ಐತಿಹಾಸಿಕ ನಿರ್ಧಾರ ಎಂದು ಬಣ್ಣಿಸಿದರು. ಈ ಮಸೂದೆಯ ಪರ ಮತ ಹಾಕಿದ ಎಲ್ಲ ಸಂಸದರಿಗೂ ಧನ್ಯವಾದ ಅರ್ಪಿಸುತ್ತೇನೆ ಎಂದು ಹೇಳಿದರು. ಹಲವಾರು ವರ್ಷಗಳಿಂದ ಕಿರುಕುಳ ಅನುಭವಿಸುತ್ತಿರುವವರಿಗೆ ಇನ್ನು ಮುಂದಾದರೂ ನ್ಯಾಯ ಸಿಗಲಿದೆ ಎಂದು ಅಭಿಪ್ರಾಯಪಟ್ಟರು.

> ವಿಧೇಯಕದ ಬಗ್ಗೆ ಭಾರತದಲ್ಲಿರುವ ಮುಸ್ಲಿಮರು ಯಾವುದೇ ರೀತಿಯ ಭೀತಿಗೆ ಒಳಪಡಬೇಕಿಲ್ಲ. ಅವರೂ (ಮುಸ್ಲಿಮರು) ಎಂದೆಂದಿಗೂ ನಮ್ಮ ನಾಗರಿಕರೇ ಆಗಿರುತ್ತಾರೆ. ಅವರನ್ನು ಯಾರೂ ಹಿಂಸಿಸುವುದಿಲ್ಲ
>
> • ಅಮಿತ್ ಶಾ, ಕೇಂದ್ರ ಗೃಹ ಸಚಿವ

ಅವರು, ತಿದ್ದುಪಡಿ ಮಸೂದೆ ಮಂಡಿಸಿ, ಇದರ ಬಗ್ಗೆ ಯಾರೂ ಹೆದರ ಬೇಕಾಗಿಲ್ಲ ಎಂದು ಭರವಸ ನೀಡಿದ್ದರು.

ಬುಧವಾರ ರಾತ್ರಿ 9ರ ವೇಳೆಗೆ ರಾಜ್ಯಸಭೆಯಲ್ಲಿ ಈ ತಿದ್ದುಪಡಿ ಮಸೂದೆಗೆ ಅನುಮೋದನೆ ಸಿಕ್ಕಿತು. ಲೋಕಸಭೆಯಲ್ಲಿ ಈ ವಿಧೇಯಕಕ್ಕೆ 311-80 ಅಂತರದ ಸಮ್ಮತಿ ದೊರಕಿತ್ತು. ಇನ್ನು ಪಾಕಿಸ್ತಾನ, ಅಫ್ಘಾನಿಸ್ತಾನ ಹಾಗೂ ಬಾಂಗ್ಲಾದೇಶಗಳಲ್ಲಿ ಧಾರ್ಮಿಕ ಕಿರುಕುಳಕ್ಕೆ ಒಳಗಾಗಿ ಬಂದು ನೆಲೆಸಿರುವ ಆ ದೇಶಗಳ ಹಿಂದೂಗಳು, ಸಿಖ್ಖರು, ಜೈನರು, ಕ್ರೈಸ್ತರು ಸೇರಿದಂತೆ ಆ ದೇಶಗಳ ಎಲ್ಲ 'ಅಲ್ಪಸಂಖ್ಯಾತ'ರಿಗೆ ಪೌರತ್ವ ಸಿಗಲಿದೆ.

ಇದರ ಜೊತೆಗೆ, ಆ ಮೂರೂ ದೇಶಗಳಿಂದ ನಿರಾಶ್ರಿತರಾಗಿ ಬಂದವರು ಭಾರತದಲ್ಲಿ 12 ವರ್ಷ ನೆಲೆಸಿದ್ದರೆ ಮಾತ್ರ ಇಲ್ಲಿನ ಪೌರತ್ವ ನೀಡಬೇಕೆಂದು 1955ರ ಪೌರತ್ವ ಕಾಯ್ದೆಯಲ್ಲಿದ್ದ ನಿಯಮವನ್ನು 5 ವರ್ಷಕ್ಕೆ ಇಳಿಸಿರುವ ಮಹತ್ವದ ಅಂಶಕ್ಕೂ ಸಂಸತ್ತಿನ ಅನುಮೋದನೆ

ಪತ್ರಿಕಾ ತುಣುಕುಗಳು

ವಿಷಯ : ಸಂಸತ್

ಪತ್ರಿಕೆ : ಪ್ರಜಾವಾಣಿ

ದಿನಾಂಕ 12/12/2019

# ಪೌರತ್ವ ಮಸೂದೆ ಹಿರಿಯರ ಸಮ್ಮತಿ

ದಿ. 12/12/19

**1ನೇ ಪುಟದಿಂದ ▶ ಆಯ್ಕೆ ಸಮಿತಿಗೆ ವರ್ಗಾವಣೆಯಿಲ್ಲ:** ನಂತರ ನಡೆದ ಚರ್ಚೆಯಲ್ಲಿ ವಿಧೇಯಕವನ್ನು ಆಯ್ಕೆ ಸಮಿತಿಯ ಅವಗಾಹನೆಗೆ ಕಳುಹಿಸಬೇಕೆಂದು ಪ್ರತಿಪಕ್ಷಗಳು ಪಟ್ಟು ಹಿಡಿದಿದ್ದವು. ಪ್ರತಿಪಕ್ಷಗಳ ಪ್ರಸ್ತಾವನೆಯನ್ನು ಸಭಾಪತಿ ಸ್ಥಾನದಲ್ಲಿ ಕುಳಿತಿದ್ದ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಸದನದ ಮತದಾನಕ್ಕೆ ಒಳಪಡಿಸಿದರು. ಆಗ, ವಿಪಕ್ಷಗಳ ಪರ ಕೇವಲ 92 ಮತ ಬಂದರೆ, ವಿರುದ್ಧವಾಗಿ 113 ಮತ ಬಂದವು. ಅಲ್ಲಿಗೆ, ವಿಧೇಯಕವನ್ನು ಆಯ್ಕೆ ಸಮಿತಿಗೆ ಕಳುಹಿಸುವ ಪ್ರಸ್ತಾವನೆಗೆ ಹಿನ್ನಡೆಯಾಯಿತು.

**14 ಆಗ್ರಹಗಳಿಗೆ ಸೋಲು:** ಚರ್ಚೆಯ ವೇಳೆ, ಶ್ರೀಲಂಕಾದಿಂದ ಆಗಮಿಸಿರುವ ಅಲ್ಪಸಂಖ್ಯಾತರಿಗೂ ಪೌರತ್ವ ನೀಡುವ ಬಗ್ಗೆ ವಿಧೇಯಕದಲ್ಲಿ ತಿದ್ದುಪಡಿ ತರಬೇಕೆಂದು ಎಂದು ಪ್ರತಿಪಕ್ಷಗಳು ಆಗ್ರಹಿಸಿದ್ದವು. ಇಂಥ ಹಲವಾರು ತಿದ್ದುಪಡಿಯ ಒಟ್ಟು 14 ಆಗ್ರಹಗಳನ್ನೂ ಸಭಾಪತಿಯವರು ವಿಧೇಯಕದ ಒಪ್ಪಿಗೆ ಕುರಿತ ಅಂತಿಮ ಮತದಾನಕ್ಕೂ ಮುನ್ನವೇ 'ಮತ ವಿಭಜನೆ'ಗೆ ಒಳಪಡಿಸಿದ್ದರು. ಆದರಲ್ಲಿ ವಿಪಕ್ಷಗಳ ಆಗ್ರಹಗಳೆಲ್ಲವೂ ಸೋಲು ಕಂಡವು. ವಿಪಕ್ಷಗಳ ಪ್ರಸ್ತಾವನೆಗಳನ್ನು ಮತದಾನಕ್ಕೆ ಒಡ್ಡುವ ಮುನ್ನವೇ ಶಿವಸೇನೆಯ ಸದಸ್ಯರು ಸಭಾತ್ಯಾಗ ಮಾಡಿ 'ಜಾಣನಡೆ' ಅನುಸರಿಸಿದರು.1

**ನ್ಯಾಯಾಲಯಕ್ಕೆ ವಿಧೇಯಕ?:** ರಾಜ್ಯಸಭೆಯಲ್ಲಿ ವಿಧೇಯಕ ಕುರಿತ ಚರ್ಚೆಯ ವೇಳೆ ಮಾತನಾಡಿದ ಕಾಂಗ್ರೆಸ್ ನಾಯಕರಾದ ಪಿ. ಚಿದಂಬರಂ, ಕಪಿಲ್ ಸಿಬಲ್, ವಿಧೇಯಕವು ಮೇಲ್ಮನೆಯಲ್ಲಿ ಅನುಮೋದನೆಗೊಂಡರೂ ತಾವು ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವು ದಾಗಿ ಹೇಳಿ... ದರು. ಈ ಹಿನ್ನೆಲೆಯಲ್ಲಿ, ವಿಧೇಯಕವು ನ್ಯಾಯಾಲಯದ ಮೆಟ್ಟಿಲೇರುವುದು ಖಾತ್ರಿಯಾಗಿ...